# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 277 (210) |
| ಸದಸ್ಯರ ಹೆಸರು | : | ಶ್ರೀ.ಸುನೀಲ್‌ಗೌಡ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 13.09.2022 |
| ಉತ್ತರಿಸುವ ಸಚಿವರು | : | ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ಪುರಸಭೆಯಲ್ಲಿ ಆಗಿರುವ ಅಕ್ರಮಗಳ ಕುರಿತು ಜಿಲ್ಲಾಧಿಕಾರಿಗಳು, ವಿಜಯಪುರ ಇವರು ಸರ್ಕಾರಕ್ಕೆ ವರದಿ ಸಲ್ಲಿಸಿದ್ದಾರೆಯೇ; ಸಲ್ಲಿಸಿದ್ದಲ್ಲಿ ವರದಿಯ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು; ಈ ಕುರಿತು ಸರ್ಕಾರ ತನಿಖೆಯನ್ನು ಕೈಗೊಂಡಿದೆಯೇ; (ಸಂಪೂರ್ಣ ವಿವರ ನೀಡುವುದು). | ಮುದ್ದೇಬಿಹಾಳ ಪುರಸಭೆ ಮುಖ್ಯಾಧಿಕಾರಿ ಶ್ರೀಮತಿ ಎಸ್.ಎಸ್.ಬಾಗಲಕೋಟ ಇವರ ಕರ್ತವ್ಯಲೋಪ ಕುರಿತು ತನಿಖಾ ವರದಿಯನ್ನು ಜಿಲ್ಲಾಧಿಕಾರಿಗಳು, ವಿಜಯಪುರ ಜಿಲ್ಲೆ ಇವರು ಸ:ಜಿನಕೋ/01/ಸಿಬ್ಬಂದಿ/22-23, ದಿನಾಂಕ:22.08.2022ರಲ್ಲಿ ಪೌರಾಡಳಿತ ನಿರ್ದೇಶನಾಲಯಕ್ಕೆ ಸಲ್ಲಿಸಿರುತ್ತಾರೆ.<br><br>ಸದರಿ ವರದಿಯಲ್ಲಿ ಮುಖ್ಯಾಧಿಕಾರಿಗಳ ವಿರುದ್ಧದ ಕರ್ತವ್ಯಲೋಪಗಳು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ ಮುದ್ದೇಬಿಹಾಳ ಪುರಸಭೆ ಮುಖ್ಯಾಧಿಕಾರಿ ಶ್ರೀಮತಿ ಎಸ್.ಎಸ್.ಬಾಗಲಕೋಟ ಇವರನ್ನು ಇಲಾಖಾ ವಿಚಾರಣೆ ಬಾಕಿ ಇರಿಸಿ ಸೇವೆಯಿಂದ ದಿನಾಂಕ:07.09.2022ರಿಂದ ಅನ್ವಯವಾಗುವಂತೆ ಪೌರಾಡಳಿತ ನಿರ್ದೇಶನಾಲಯವು ದಿನಾಂಕ:07.09.2022 ರಂದು ಅಮಾನತ್ತುಗೊಳಿಸಿ ಆದೇಶಿಸಿರುತ್ತದೆ. *(ಅನುಬಂಧ-1 ರಲ್ಲಿ ಲಗತ್ತಿಸಿದೆ).* |
| ಆ) | ಮುದ್ದೇಬಿಹಾಳ ಪುರಸಭೆಯಲ್ಲಿ ಕ್ರಿಯಾ ಯೋಜನೆಯನ್ನು ತಯಾರಿಸಲಾಗಿದೆಯೇ; ತಯಾರಿಸಿದ್ದಲ್ಲಿ, ಈ ಕ್ರಿಯಾ ಯೋಜನೆಗೆ ಪುರಸಭೆಯ ಸಾಮಾನ್ಯ ಸಭೆಯ ಒಪ್ಪಿಗೆ ಪಡೆದುಕೊಳ್ಳಲಾಗಿದೆಯೇ; (ದಾಖಲೆಗಳನ್ನು ನೀಡುವುದು ಮತ್ತು ಸಂಪೂರ್ಣ ವಿವರ ನೀಡುವುದು). | 2022-23ನೇ ಸಾಲಿನಲ್ಲಿ 15ನೇ ಹಣಕಾಸು ಯೋಜನೆ, SFC SCSP&TSP ಯೋಜನೆಗಳ ಹಂಚಿಕೆಯಾದ ಅನುದಾನಕ್ಕೆ ಕ್ರಿಯಾಯೋಜನೆ ತಯಾರಿಸಲಾಗಿರುತ್ತದೆ. ಈ ಎಲ್ಲಾ ಕ್ರಿಯಾ ಯೋಜನೆಗಳಿಗೆ ಸಾಮಾನ್ಯ ಸಭೆಯ ಒಪ್ಪಿಗೆ ಪಡೆಯಲಾಗಿರುತ್ತದೆ. *(ಅನುಬಂಧ-2 ರಲ್ಲಿ ಲಗತ್ತಿಸಿದೆ).* |
| ಇ) | ಮುದ್ದೇಬಿಹಾಳ ಪುರಸಭೆಯ ಕ್ರಿಯಾ ಯೋಜನೆಯನ್ನು ಬದಲಾವಣೆ ಮಾಡಲಾಗಿದೆಯೇ; ಮಾಡಿದ್ದಲ್ಲಿ, ಬದಲಾವಣೆ ಮಾಡಲು ಕಾರಣಗಳೇನು ಮತ್ತು ಈ ಬದಲಾವಣೆಗೆ ಆಡಳಿತ ಮಂಡಳಿ/ಸಾಮಾನ್ಯ ಸಭೆಯ ಒಪ್ಪಿಗೆಯನ್ನು ಪಡೆದುಕೊಳ್ಳಲಾಗಿದೆಯೇ? (ಸಂಪೂರ್ಣ ವಿವರ ನೀಡುವುದು). | ಮುದ್ದೇಬಿಹಾಳ ಪುರಸಭೆಯ ಕ್ರಿಯಾ ಯೋಜನೆಯನ್ನು ಬದಲಾವಣೆ ಮಾಡಿರುವುದಿಲ್ಲ. |

**ಸಂಖ್ಯೆ:ನಅಇ 04 ಎಲ್‌ಸಿಕ್ಯೂ 2022**

(ಎನ್.ನಾಗರಾಜು (ಎಂ.ಟಿ.ಬಿ))
ಪೌರಾಡಳಿತ, ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ
ವಲಯ ಉದ್ಯಮಗಳ ಸಚಿವರು.

ನಿರ್ದೇಶಕರ ಕಛೇರಿ
ಪೌರಾಡಳಿತ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ಫ್ಯಾಕ್ಸ್: 080-22863576/1665
Email: dmablr@gmail.com
9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ,
ಡಾ: ಅಂಬೇಡ್ಕರ್ ವೀಧಿ, ಬೆಂಗಳೂರು 560001.

**ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರ ನಡವಳಿಗಳು**

**ವಿಷಯ:** ಶ್ರೀಮತಿ.ಎಸ್.ಎಸ್.ಬಾಗಲಕೋಟ. ಮುಖ್ಯಾಧಿಕಾರಿ. ಪುರಸಭೆ ಮುದ್ದೇಬಿಹಾಳ ಇವರ ವಿರುದ್ಧದ ಶಿಸ್ತು ಕ್ರಮದ ಕುರಿತು.

**ಉಲ್ಲೇಖ:** 1) ಜಿಲ್ಲಾಧಿಕಾರಿಗಳು, ವಿಜಯಪುರ ಜಿಲ್ಲೆ ರವರ ಪತ್ರ ಸಂಖ್ಯೆ: ಕೋ-1/ಸಿಬ್ಬಂದಿ/2022-23//491.ದಿ:22.08.2022.(ಸ್ವೀಕೃತಿ ದಿ:02.09.2022)

*****

**ಪ್ರಸ್ತಾವನೆ:**

ಜಿಲ್ಲಾಧಿಕಾರಿಗಳು, ವಿಜಯಪುರ ಜಿಲ್ಲೆ ರವರು ಸಲ್ಲಿಸಿರುವ ಉಲ್ಲೇಖದ ಪ್ರಸ್ತಾವನೆಯಲ್ಲಿ ಮುದ್ದೇಬಿಹಾಳ ಪುರಸಭೆಯ ಮುಖ್ಯಾಧಿಕಾರಿ ಶ್ರೀಮತಿ.ಎಸ್.ಎಸ್. ಬಾಗಲಕೋಟ (ಮೂಲ ಹುದ್ದೆ ಕಛೇರಿ ವ್ಯವಸ್ಥಾಪಕರು) ಇವರ ವಿರುದ್ಧದ 12 ಅಂಶಗಳ ಆಡಳಿತ ಧೋರಣೆ ಕುರಿತು ಸಲ್ಲಿಕೆಯಾಗಿರುವ ಸಾರ್ವಜನಿಕ ದೂರು ಮನವಿಯ ಅಂಶಗಳ ಕುರಿತು ಪರಿಶೀಲನೆಗಾಗಿ ತನಿಖಾ ತಂಡವನ್ನು ನಿಯೋಜಿಸಿ, ವರದಿಯನ್ನು ಪಡೆಯಲಾಗಿದೆ. ದೂರಿನ 12 ಅಂಶಗಳ ಕುರಿತು ತನಿಖೆ ಮಾಡಿರುವ ತನಿಖಾ ತಂಡ ಕೆಳಕಂಡ 04 ಅಂಶಗಳಲ್ಲಿ ಮುಖ್ಯಾಧಿಕಾರಿಗಳು ಕರ್ತವ್ಯಲೋಪ ಎಸಗಿದ್ದಾರೆಂದು ವರದಿ ಮಾಡಿರುವುದನ್ನು ಜಿಲ್ಲಾಧಿಕಾರಿಗಳು ತಮ್ಮ ವರದಿಯಲ್ಲಿ ಉಲ್ಲೇಖಿಸಿದ್ದಾರೆ.

1. ಮುಖ್ಯಾಧಿಕಾರಿಗಳಾದ ಶ್ರೀಮತಿ.ಎಸ್.ಎಸ್. ಬಾಗಲಕೋಟ ರವರು ಪಟ್ಟಣದಲ್ಲಿ ವಾಸ್ತವ್ಯ ಮಾಡಿ, ಇಲ್ಲಿಯ ಸಮಸ್ಯೆಗಳನ್ನು ಅರಿತುಕೊಳ್ಳಬೇಕಾಗಿದ್ದು, ಆದರೆ ಇವರು ಹೆಚ್ಚುವರಿಯಾಗಿ ನಾಲತವಾಡ ಪಟ್ಟಣ ಪಂಚಾಯಿತಿಯಲ್ಲಿ ಮುಖ್ಯಾಧಿಕಾರಿಯಾಗಿ ಪ್ರಭಾರ ವಹಿಸಿಕೊಂಡು ಕೆಲಸ ನಿರ್ವಹಿಸುತ್ತಿರುವುದರಿಂದ ನಗರದ ಸಮಸ್ಯೆಗಳಿಗೆ ಸ್ಪಂದಿಸಲು ಆಗಿರುವುದಿಲ್ಲ. ಕೇಂದ್ರ ಸ್ಥಾನದಲ್ಲಿ ಕೆಲಸ ನಿರ್ವಹಿಸಬೇಕಾಗಿದ್ದು, ದಿ:17.07.2022 ರಿಂದ ಪಟ್ಟಣದಲ್ಲಿ ವಾಸ್ತವ್ಯ ಮಾಡುತ್ತಿದ್ದಾರೆ. ಕೆ.ಸಿ.ಎಸ್.ಆರ್ ನಿಯಮ 12 ರಿಂದ 16 ನ್ನು ಉಲ್ಲಂಘಿಸಿರುತ್ತಾರೆ.

2. ಶ್ರೀ.ಸುರೇಶ.ಕೆ.ಶೆಟ್ಟಿ ಇವರ ಮೂಲಕ ವಾಹನ ಬಾಡಿಗೆ ಪಡೆದಿರುವ ದಾಖಲಾತಿಗಳನ್ನು ವಿಚಾರಣೆಗೆ ಹಾಜರುಪಡಿಸಿಲ್ಲ. ಸದರಿ ಗುತ್ತಿಗೆದಾರರು ಇವರ ಪತಿಯಾಗಿದ್ದು, ಒಂದೇ ಕಂತಿನಲ್ಲಿ ಇವರಿಗೆ ಚೆಕ್ ನಂ.021599 ರ ಮೂಲಕ ರೂ.2,75,000/-ಗಳನ್ನು ಕೆಟಿಪಿಪಿ ಕಾಯ್ದೆ ಉಲ್ಲಂಘಿಸಿ ಸಂದಾಯ ಮಾಡಿರುತ್ತಾರೆ.

3. ಜಿಲ್ಲಾಧಿಕಾರಿಗಳ ಕಛೇರಿಯಿಂದ ದಿ:24.12.2020 ರಂದು ಒಟ್ಟು 92 ಮಳಿಗೆಗಳ ಬಹಿರಂಗ ಹರಾಜು ಅನುಮೋದನೆಯಾಗಿದ್ದು, ಮುಖ್ಯಾಧಿಕಾರಿಗಳು 22 ಮಳಿಗೆಗಳನ್ನು ಬಹಿರಂಗ ಹರಾಜು ಮಾಡಿರುತ್ತಾರೆ. ಈ ಪೈಕಿ 14 ಮಳಿಗೆಗಳನ್ನು ಲೀಸ್‌ದಾರರಿಗೆ ನೋಂದಣಿ ಮಾಡಿ ಹಂಚಿಕೆ ಮಾಡಿರುತ್ತಾರೆ. ಆದರೆ ಲೀಸ್‌ದಾರರಿಗೆ ಹಂಚಿಕೆ ಮಾಡುವ ಮುನ್ನ ಜಿಲ್ಲಾಧಿಕಾರಿಗಳ ಕಛೇರಿಯಿಂದ ಅನುಮೋದನೆ ಪಡೆದಿರುವುದಿಲ್ಲ. ಹರಾಜು ಷರತ್ತಿನ Right of First Refusal ಬಗ್ಗೆ ವಿವರಣೆ ನೀಡಿರುವುದಿಲ್ಲ.

4. ಕಾನೂನು ಬಾಹಿರ ಸಾರ್ವಜನಿಕ ಜಾಗಗಳನ್ನು 02 ಸಂಸ್ಥೆಗಳಿಗೆ ನೋಂದಣಿ ಮಾಡಿ ಉಪನೋಂದಣಾಧಿಕಾರಿಗಳ 1957 ರ ಮುದ್ರಾಂಕ ಶುಲ್ಕ ಕಾಯ್ದೆಯನ್ವಯ ನಿವೇಶನ ಬೆಲೆಯ ಮೇಲೆ ಬಾಡಿಗೆಯನ್ನು ನಿಗದಿಪಡಿಸಿರುವುದಿಲ್ಲ. ನಗರ ಯೋಜನಾ ಪ್ರಾಧಿಕಾರದ ಸಹಾಯಕ

ನಿರ್ದೇಶಕರಿಂದ ಜಾಗದ ಮಂಜೂರಿ ಬಗ್ಗೆ ಅಭಿಪ್ರಾಯ ಪಡೆಯುವುದಿಲ್ಲ. ಸರ್ಕಾರದ ಸುತ್ತೋಲೆ ಸಂನಅಇ 01 ಬಿಎಂಡಿ 2018, ದಿ:30.01.2018 ರ ಪರಿಚ್ಛೇದದಂತೆ ನಿವೇಶನ ಮಂಜೂರು ಮಾಡಿರುವುದಿಲ್ಲ. ಮುಖ್ಯಾಧಿಕಾರಿಗಳು ಉಪನೋಂದಣಾಧಿಕಾರಿಗಳಿಗೆ ಜಾಗದ ನೋಂದಣಿ ರದ್ದುಪಡಿಸಲು ಪತ್ರ ಬರೆದಿದ್ದು, ಪತ್ರದ ಮೇಲೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

ಜಿಲ್ಲಾಧಿಕಾರಿಗಳ ಶಿಸ್ತು ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಮುದ್ದೇಬಿಹಾಳ ಪುರಸಭೆಯ ಮುಖ್ಯಾಧಿಕಾರಿ ಶ್ರೀಮತಿ.ಎಸ್.ಎಸ್. ಬಾಗಲಕೋಟ (ಮೂಲ ಹುದ್ದೆ ಕಛೇರಿ ವ್ಯವಸ್ಥಾಪಕರು) ಇವರು ಪುರಸಭೆಯ ಆಡಳಿತದಲ್ಲಿ ಕರ್ತವ್ಯಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುವುದರಿಂದ ಹಾಗೂ 2010 ರ ಕರ್ನಾಟಕ ಪುರಸಭೆಗಳ (ಅಧಿಕಾರಿ ಮತ್ತು ನೌಕರರ ನೇಮಕಾತಿ ನಿಯಮ) 4(2)(ಬಿ) ರನ್ವಯ ಗ್ರೂಪ್ 'ಬಿ' ವೃಂದದ ಹುದ್ದೆಗಳ ನೇಮಕಾತಿ ಪ್ರಾಧಿಕಾರ ಪೌರಾಡಳಿತ ನಿರ್ದೇಶನಾಲಯವಾಗಿದ್ದು, ಇವರ ವಿರುದ್ಧದ ಆರೋಪಗಳ ಕುರಿತು ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ಸೇವೆಯಿಂದ ಅಮಾನತ್ತುಗೊಳಿಸುವ ಕುರಿತು ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**<u>ಆದೇಶ ಸಂ:871423/ಡಿಎಂಎ/ಇಎಸ್‌ಕ್ಯೂ2/ಬಿಜಿಎಂ/21/2022, ದಿನಾಂಕ:೨೭.09.2022.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಮಂಜುಶ್ರೀ.ಎನ್, ಭಾ.ಆ.ಸೇ, ಶಿಸ್ತು ಪ್ರಾಧಿಕಾರಿ ಹಾಗೂ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಆದ ನಾನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 9(2)(ಸಿ) ರಂತೆ ಪ್ರದತ್ತವಾದ ಅಧಿಕಾರದನ್ವಯ ಮೇಲ್ಕಂಡ ನಿಯಮಗಳ ನಿಯಮ 10(1) ರನ್ವಯ ಮುದ್ದೇಬಿಹಾಳ ಪುರಸಭೆಯ ಮುಖ್ಯಾಧಿಕಾರಿ ಶ್ರೀಮತಿ.ಎಸ್.ಎಸ್. ಬಾಗಲಕೋಟ (ಮೂಲ ಹುದ್ದೆ ಕಛೇರಿ ವ್ಯವಸ್ಥಾಪಕರು) ಇವರ ವಿರುದ್ಧದ ಆರೋಪಗಳ ಕುರಿತು ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ಸೇವೆಯಿಂದ ಅಮಾನತ್ತುಗೊಳಿಸಿದೆ. ಇವರ ಲೀನ್(ಸ್ಥಾನ)ನ್ನು **ಹಾರುಗೇರಿ ಪುರಸಭೆಯಲ್ಲಿ** ಖಾಲಿ ಇರುವ **ಕಛೇರಿ ವ್ಯವಸ್ಥಾಪಕರ** ಮೂಲ ಹುದ್ದೆಗೆ ಬದಲಾಯಿಸಿ ಆದೇಶಿಸಿದೆ.

ಸದರಿ ನೌಕರರು ಅಮಾನತ್ತು ಅವಧಿಯಲ್ಲಿ ಕೆ.ಸಿ.ಎಸ್.ಆರ್ ನಿಯಮ 98 ರನ್ವಯ ಜೀವನಾಧಾರ ಭತ್ಯೆಗೆ ಅರ್ಹರಿದ್ದು, ಮೇಲಾಧಿಕಾರಿಗಳ ಅನುಮತಿಯಿಲ್ಲದೆ ಕೇಂದ್ರ ಸ್ಥಾನ ಬಿಡತಕ್ಕದ್ದಲ್ಲ.

ನಿರ್ದೇಶಕರು,
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು.

ಪ್ರತಿಯನ್ನು ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ:

1. ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು.
2. ಜಿಲ್ಲಾಧಿಕಾರಿಗಳು, ವಿಜಯಪುರ ಜಿಲ್ಲೆ.
3. ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ.
4. ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ವಿಜಯಪುರ ಜಿಲ್ಲೆ ಇವರು ಮುದ್ದೇಬಿಹಾಳ ಪುರಸಭೆಯ ಮುಖ್ಯಾಧಿಕಾರಿ ಶ್ರೀಮತಿ.ಎಸ್.ಎಸ್. ಬಾಗಲಕೋಟ (ಮೂಲ ಹುದ್ದೆ ಕಚೇರಿ ವ್ಯವಸ್ಥಾಪಕರು) ಇವರಿಗೆ ಅಮಾನತ್ತು ಆದೇಶ ಜಾರಿ ಮಾಡಿ, ಇ-ತಂತ್ರಾಂಶದಲ್ಲಿ Used Id & Password ಮೂಲಕ Login ಆಗಿರುವ ಡಿ.ಎಸ್.ಸಿ ಕೀ ಯನ್ನು ತಕ್ಷಣದಿಂದ ನಿಷ್ಕ್ರಿಯಗೊಳಿಸಿ, ವರದಿ ನೀಡಲು ಸೂಚಿಸಿದೆ.

5. ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ವಿಜಯಪುರ ಜಿಲ್ಲೆ ಇವರಿಗೆ ಶ್ರೀಮತಿ.ಎಸ್.ಎಸ್. ಬಾಗಲಕೋಟ (ಮೂಲ ಹುದ್ದೆ ಕಛೇರಿ ವ್ಯವಸ್ಥಾಪಕರು) ಇವರ ವಿರುದ್ಧದ ಆರೋಪಗಳ ಕುರಿತು ದೋಷಾರೋಪಣಾ ಪಟ್ಟಿ ಅನುಬಂಧ 1 ರಿಂದ 4ನ್ನು ಸಿದ್ದಪಡಿಸಿ ಅನುಬಂಧ 3 ದಾಖಲಾತಿಗಳ ಸಹಿತ ಜರೂರಾಗಿ ಜಿಲ್ಲಾಧಿಕಾರಿಗಳ ಮೂಲಕ ಸಲ್ಲಿಸುವಂತೆ ಸೂಚಿಸಿದೆ).
6. ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಳಗಾವಿ ಜಿಲ್ಲೆ.
7. ಮುಖ್ಯಾಧಿಕಾರಿಗಳು, ಮುದ್ದೇಬಿಹಾಳ, ಪುರಸಭೆ, ವಿಜಯಪುರ ಜಿಲ್ಲೆ.
8. ಮುಖ್ಯಾಧಿಕಾರಿಗಳು, ಹಾರುಗೇರಿ, ಪುರಸಭೆ, ಬೆಳಗಾವಿ ಜಿಲ್ಲೆ.
9. ಶ್ರೀಮತಿ.ಎಸ್.ಎಸ್. ಬಾಗಲಕೋಟ, ಮುದ್ದೇಬಿಹಾಳ ಪುರಸಭೆ, (ಮೂಲ ಹುದ್ದೆ ಕಛೇರಿ ವ್ಯವಸ್ಥಾಪಕರು). ಇವರ ಪ್ರತಿಯನ್ನು ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ವಿಜಯಪುರ ಜಿಲ್ಲೆ ಇವರ ಮೂಲಕ ಜಾರಿಗೊಳಿಸಿ, ಸ್ವೀಕೃತಿಯನ್ನು ಸಲ್ಲಿಸುವಂತೆ ಸೂಚಿಸಿದೆ.
10. ಕಚೇರಿ ಪ್ರತಿ

ಅನುಬಂಧ 2

| | |
|---|---|
| ಯ ನಂ 10<br>ಸನ್ 2022-23 ನೇ ಸಾಲಿನ ಎಸ್‌ಎಫ್‌ಸಿ ಅನುದಾನದಲ್ಲಿ ಶೇ 24.10% .7%. ಮತ್ತು 5% ಕ್ರೀಯಾ ಯೋಜನೆ ಮಾಡುವ ಕುರಿತು. | ಠರಾವು ನಂ 97<br><br>ಸನ್ 2022-23 ನೇ ಸಾಲಿನ ಎಸ್‌ಎಫ್‌ಸಿ ಅನುದಾನದಲ್ಲಿ ಶೇ.24.10% ಕ್ರೀಯಾ ಯೋಜನೆ ತಯಾರಿಸುವದಕ್ಕಾಗಿ ಸರ್ಕಾರದಿಂದ ಹಂಚಿಕೆಯಾದ ಅನುದಾನಕ್ಕೆ ಕ್ರಿಯಾಯೋಜನೆ ತಯಾರಿಸುವುದಕ್ಕೆ ಮುಖ್ಯಾಧಿಕಾರಿಗಳು ಸರ್ಕಾರದ ಮಾರ್ಗಸೂಚಿಗಳನ್ನು ಹಾಗೂ ಅನುದಾನದ ಲಭ್ಯತೆಯನ್ನು ಈ ಕೆಳಗಿನಂತೆ ಸಭೆಗೆ ವಿವರಿಸಿದರು. 1) ಸರ್ಕಾರದ ಸುತ್ತೋಲೆ ಸಂಖ್ಯೆ ನಅಇ/20 ಪಿ.ಎಸ್.ಜಿ 2018 ದಿನಾಂಕ 16-01-2019 2) ಸರ್ಕಾರದ ಸುತ್ತೋಲೆ ಸಂಖ್ಯೆ ನಅಇ/23 ಪಿ.ಎಸ್.ಜಿ 2018 ದಿನಾಂಕ 03-06-2019 ರ 3) ಸರ್ಕಾರದ ಸುತ್ತೋಲೆ ಸಂಖ್ಯೆ ನಅಇ/25 ಪಿ.ಎಸ್.ಜಿ 2018 ದಿನಾಂಕ 07-06-2019 ಪ್ರಕಾರ ಶೇ 40ರಷ್ಟು ವಯಕ್ತಿಕ ಕಾರ್ಯಕ್ರಮಗಳಿಗೆ ಹಾಗೂ ಶೇ 60ರಷ್ಟು ಸಮುದಾಯ ಆಧಾರಿತ ಕಾರ್ಯಕ್ರಮಗಳಿಗೆ ಕಾಯ್ದಿರಿಸುವಂತೆ ಸೂಚಿಸಿದ್ದು ಈ ಕೆಳಗಿನಂತೆ ಕಾಯ್ದಿರಿಸಿದೆ. ಸನ್ 2022-23 ಎಸ್ ಎಫ್ ಸಿ ಶೇ,24.10 ನಿಧಿಯ ವಿವರ |

| ಅನುದಾನದ ವಿವರ | ಮೊತ್ತ (ರೂ.ಲಕ್ಷಗಳಲ್ಲಿ) |
|---|---|
| ಸನ್ 2022-23 ನೇ ಸಾಲಿಗೆ ಪರಿಶಿಷ್ಟ ಜಾತಿ (SC) ಯವರಿಗೆ ಹಂಚಿಕೆ ಮಾಡಿದ ಎಸ್ ಎಫ್ ಸಿ ಅನುದಾನ | 10.00 |
| ಸನ್ 2022-23 ನೇ ಸಾಲಿಗೆ ಪರಿಶಿಷ್ಟ ಪಂಗಡ (ST) ದವರಿಗೆ ಹಂಚಿಕೆ ಮಾಡಿದ ಎಸ್ ಎಫ್ ಸಿ ಅನುದಾನ | 4.00 |

| ಅ.ನಂ | ಕಾರ್ಯಕ್ರಮ ವಿವರ | ರೂ. ಲಕ್ಷಗಳಲ್ಲಿ |
|---|---|---|
| 1 | ಪರಿಶಿಷ್ಟ ಜಾತಿಯವರಿಗೆ ಕಾಯ್ದಿರಿಸಿದ ಅನುದಾನ | 10.00 |
| 2 | ಪೌರ ಕಾರ್ಮಿಕರಿಗೆ ನಿಗದಿಪಡಿಸಿದ ಅನುದಾನ ಶೇ 20% | 2. 00 |
| 3 | ಪರಿಶಿಷ್ಟ ಜಾತಿಯವರಿಗೆ ಉಳಿದ ಅನುದಾನ | 8.00 |
| 4 | ಪರಿಶಿಷ್ಟ ಪಂಗಡದವರಿಗೆ ಕಾಯ್ದಿರಿಸಿದ ಅನುದಾನ | 4.00 |
| 5 | ಪೌರ ಕಾರ್ಮಿಕರಿಗೆ ನಿಗದಿಪಡಿಸಿದ ಅನುದಾನ ಶೇ 20% | 0.00 |
| 6 | ಪರಿಶಿಷ್ಟ ಪಂಗಡದವರಿಗೆ ಉಳಿದ ಅನುದಾನ | 4.00 |

**ಸನ್ 2022–23 ನೇ ಸಾಲಿನ ಶೇ. 24.10 ರಷ್ಟು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಪೌರಕಾರ್ಮಿಕರಿಗೆ ನಿಗಧಿಪಡಿಸಿದ ಶೇ. 20 ರಷ್ಟು ಕಾಯ್ದಿರಿಸಿದ ಅನುದಾನ 2.00 ಲಕ್ಷ**

| ಅ ನಂ | ಮಾರ್ಗ ಸೂಚಿ ಸಂಖ್ಯೆ | ಕಾರ್ಯಕ್ರಮಗಳು ವಿವರ | ರೂ. ಲಕ್ಷಗಳಲ್ಲಿ |
|---|---|---|---|
| 2 | 6.0 | ಪೌರ ಕಾರ್ಮಿಕರಿಗೆ ಅಲ್ಪೋಪಹಾರ | 2.00 |
| | | ಒಟ್ಟು ರೂ. | **2.00** |

**ಸನ್ 2022–23 ನೇ ಸಾಲಿನ ಶೇ. 24.10 ರಷ್ಟು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಜನರಿಗೆ ಕಲ್ಯಾಣಕ್ಕಾಗಿ ಕಾಯ್ದಿರಿಸಿದ ಅನುದಾನದ ವಿವರ**

| | | |
|---|---|---|
| I | **ಪರಿಶಿಷ್ಟ ಜಾತಿಯವರಿಗೆ ಕಾಯ್ದಿರಿಸಿದ ಅನುದಾನ 8.00 ಲಕ್ಷ** | **8.00** |
| ಅ | ವ್ಯಕ್ತಿ ಸಂಬಂಧಿತ ಕಾರ್ಯಕ್ರಮಕ್ಕೆ ಶೇ. 40 ಕಾಯ್ದಿರಿಸಿದ ಮೊತ್ತ 3.20 * 40 / 100 = 3.20 ಲಕ್ಷ | **3.20** |
| ಬ | ಸಮುದಾಯ ಸಂಬಂಧಿತ ಕಾರ್ಯಕ್ರಮಕ್ಕೆ ಶೇ. 60 ಕಾಯ್ದಿರಿಸಿದ ಮೊತ್ತ 4.00 * 60 / 100 = 2.40 ಲಕ್ಷ | **4.60** |

| | | |
|---|---|---|
| II | **ಪರಿಶಿಷ್ಟ ಪಂಗಡದವರಿಗೆ ಕಾಯ್ದಿರಿಸಿದ ಅನುದಾನ 4.00 ಲಕ್ಷ** | **4.00** |
| ಅ | ವ್ಯಕ್ತಿ ಸಂಬಂಧಿತ ಕಾರ್ಯಕ್ರಮಕ್ಕೆ ಶೇ. 40 ಕಾಯ್ದಿರಿಸಿದ ಮೊತ್ತ 1.60 * 40 / 100 = 0.64ಲಕ್ಷ | **1.60** |
| ಬ | ಸಮುದಾಯ ಸಂಬಂಧಿತ ಕಾರ್ಯಕ್ರಮಕ್ಕೆ ಶೇ. 60 ಕಾಯ್ದಿರಿಸಿದ ಮೊತ್ತ 2.40 * 60 / 100 = 2.40 ಲಕ್ಷ | **2.40** |

**ಪರಿಶಿಷ್ಟ ಜಾತಿ ವ್ಯಕ್ತಿ ಸಂಬಂಧಿತ ಕಾರ್ಯಕ್ರಮಗಳು ಮೊತ್ತ ಶೇ. 40 ರೂ. 3.84 ಲಕ್ಷ**

| ಅ ನಂ | ಮಾರ್ಗ ಸೂಚಿ ಸಂಖ್ಯೆ | ಕಾರ್ಯಕ್ರಮಗಳು ವಿವರ | ರೂ. ಲಕ್ಷಗಳಲ್ಲಿ |
|---|---|---|---|
| 1 | 7.1.3 | ಪರಿಶಿಷ್ಟ ಜಾತಿಯ ಮಹಿಳೆಯರಿಗೆ ಹೊಲಿಗೆ ತರಬೇತಿ ಪಡೆದ ಮಹಿಳೆಯರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಹೊಲಿಗೆ ಯಂತ್ರ ಖರೀದಿಸಿ ವಿತರಿಸುವದು. | **3.20** |
| | | ಒಟ್ಟು | **3.20** |

**ಪರಿಶಿಷ್ಟ ಜಾತಿ ಸಮುದಾಯ ಸಂಬಂಧಿತ ಕಾರ್ಯಕ್ರಮಗಳು ಶೇ. 60 ಕಾಯ್ದಿರಿಸಿದ ಮೊತ್ತ 4.60ಲಕ್ಷ**

| ಅ ನಂ | ಮಾರ್ಗ ಸೂಚಿ ಸಂಖ್ಯೆ | ಕಾರ್ಯಕ್ರಮಗಳು ವಿವರ | ಕಾಯ್ದಿರಿಸಬೇಕಾದ ಮೊತ್ತ |
|---|---|---|---|
| 1 | 8.2.1 | ವಾರ್ಡ ನಂ 14 ರಲ್ಲಿ ಹಡ್ಲಗೇರಿ ಸತ್ಯಪ್ಪ ಮನೆಯಿಂದ ಮಲ್ಲಿಕಾರ್ಜುನ ಮನೆಯವರೆಗೆ ಫೇವರ್ ಬ್ಲಾಕ್ ಕಾಮಗಾರಿ ಕೈಗೊಳ್ಳುವದು | 2.20 |
| 2 | 8.2.1 | ವಾರ್ಡ ನಂ 13 ರಲ್ಲಿ ಸಾಬಣ್ಣ ಚಲವಾದಿ ಮನೆಯಿಂದ ಶಿವಮ್ಮ ಭಜಂತ್ರಿ ಮನೆಯವರೆಗೆ ವಿದ್ಯುತ್ ಕೇಬಲ ಅಳವಡಿಸುವದು | 0.80 |
| 3 | 8.2.1 | ವಾರ್ಡ ನಂ 13 ರಲ್ಲಿ ಅಂಬೇಡ್ಕರ ಭವನ ಸಮುದಾಯ ಭವನ ಉನ್ನತಿಕರಣಗೊಳಸುವದು | 0.75 |
| | 8.2.1 | ವಾರ್ಡ ನಂ 13 ರಲ್ಲಿ ಆನಂದ ಭಜಂತ್ರಿ ಮನೆಯಿಂದ ಸಾಬು ಚಲವಾದಿ ಮನೆಯವರೆಗೆ ಪೈಪಲೈನ ಮಾಡುವದು | 0.65 |
| 4 | 8.3 | ಡಾ//ಬಿ.ಆರ್.ಅಂಬೇಡ್ಕರ ಜಯಂತಿ/ಬಾಬು ಜಗಜೀವನರಾಮ ಜಯಂತಿ ಆಚರಣೆ ಸಲುವಾಗಿ | 0.20 |
| | | ಒಟ್ಟು | **4.60** |

**ಪರಿಶಿಷ್ಟ ಪಂಗಡ ವ್ಯಕ್ತಿ ಸಂಬಂಧಿತ ಕಾರ್ಯಕ್ರಮಗಳು ಮೊತ್ತ ಶೇ. 40 ರೂ. 1.60 ಲಕ್ಷ**

| ಅ ನಂ | ಮಾರ್ಗ ಸೂಚಿ ಸಂಖ್ಯೆ | ಕಾರ್ಯಕ್ರಮಗಳು ವಿವರ | ರೂ. ಲಕ್ಷಗಳಲ್ಲಿ |
|---|---|---|---|
| 1 | 7.4.2 | ಪರಿಶಿಷ್ಟ ಪಂಗಡ ಮಹಿಳೆಯರಿಗೆ ಹೊಲಿಗೆ ತರಬೇತಿ ಪಡೆದ ಮಹಿಳೆಯರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಹೊಲಿಗೆ ಯಂತ್ರ ಖರೀದಿಸಿ ವಿತರಿಸುವದು. | 1.60 |
| | | ಒಟ್ಟು | 1.60 |

**ಪರಿಶಿಷ್ಟ ಪಂಗಡ ಸಮುದಾಯ ಸಂಬಂಧಿತ ಕಾರ್ಯಕ್ರಮಗಳು ಶೇ. 60 ಕಾಯ್ದಿರಿಸಿದ ಮೊತ್ತ 2.40 ಲಕ್ಷ**

| ಅ ನಂ | ಮಾರ್ಗ ಸೂಚಿ ಸಂಖ್ಯೆ | ಕಾರ್ಯಕ್ರಮಗಳು ವಿವರ | ಕಾಯ್ದಿರಿಸಬೇಕಾದ ಮೊತ್ತ |
|---|---|---|---|
| 1 | 8.3 | ವಾಲ್ಮೀಕಿ ಜಯಂತಿ ಆಚರಣೆ ಸಲುವಾಗಿ | 0.10 |
| 2 | 8.2.1 | ಮಹಾಂತೇಶ ನಗರ ಮುಖ್ಯರಸ್ತೆಯಿಂದ ಬಿದ್ನಾಳಮಠರವರ ಮನೆಯವರೆಗೆ ಫೇವರ ಬ್ಲಾಕ್ ಅಳವಡಿಸುವ ಕಾಮಗಾರಿಯನ್ನು ಕೈಗೊಳ್ಳುವದು (ಪುರಸಭೆ ನಿಧಿಯಿಂದ 0.88+ಎಸ್.ಎಫ್.ಸಿ ಅನುದಾನದಿಂದ 2.30 = ಒಟ್ಟು 3.18) | 2.30 |
| | | ಒಟ್ಟು | 2.40 |

ಸದರಿ ಮೇಲಿನಂತೆ ಸರ್ಕಾರದ ಮಾರ್ಗಸೂಚಿ ಅನುಸಾರ ಕ್ರಿಯಾಯೋಜನೆಗೆ ಸಭೆಯಲ್ಲಿ ಉಪಸ್ಥಿತರಿದ್ದ ಸರ್ವ ಸದಸ್ಯರು ಸರ್ವಾನುಮತದಿಂದ ಒಪ್ಪಿಗೆ ನೀಡಿ ಠರಾವು ಪಾಸು ಮಾಡಲಾಯಿತು.

ಸೂಚಕರು :- ಶ್ರೀ ಯಲ್ಲಪ್ಪ ನಾಯಕಮಕ್ಕಳ

ಅನುಮೋದಕರು :- ಶ್ರೀ ಶಿವಪ್ಪ ಶೇಖಪ್ಪ ಹರಿಜನ ಉರ್ಫ ಶಿವಪುರ,

ಅಧ್ಯಕ್ಷರು
ಪುರಸಭೆ ಮುದ್ದೇಬಿಹಾಳ

" ಅಸಲಿನಂತೆ ನಕಲು ಸರಿ ಇರುತ್ತದೆ."

ಮುಖ್ಯಾಧಿಕಾರಿಗಳು
ಪುರಸಭೆ ಮುದ್ದೇಬಿಹಾಳ

# ಪುರಸಭೆ ಕಾರ್ಯಾಲಯ, ಮುದ್ದೇಬಿಹಾಳ

**ದಿ : 27-06-2022 ರಂದು ಬೆಳಿಗ್ಗೆ 11–00 ಗಂಟೆಗೆ ಮಾನ್ಯ ಅಧ್ಯಕ್ಷರಅಧ್ಯಕ್ಷತೆಯಲ್ಲಿ ಜರುಗಿದ ಸಾಮಾನ್ಯ ಸಭೆಯ ನಡುವಳಿಗಳು**

| ವಿಷಯ ನಂ. | ಠರಾವು ನಂ.58 ರ ನಡುವಳಿ |
|---|---|
| ಮುದ್ದೇಬಿಹಾಳ ಪುರಸಭೆಗೆ ಸನ್ 2022–23 ನೇ ಸಾಲಿನ 15 ನೇ ಹಣಕಾಸು ಯೋಜನೆ ಜನರಲ್ ಬೇಸಿಕ್ ಗ್ರ್ಯಾಂಟ್ ಅನುದಾನದ ಕ್ರಿಯಾ ಯೋಜನೆಗೆ ಮಂಜೂರಿ ನೀಡುವ ಕುರಿತು. | ಸನ್ 2022–23ನೇ ಸಾಲಿನ 15ನೇ ಹಣಕಾಸು ಯೋಜನೆಯಡಿ ಸಾಮಾನ್ಯ ಮೂಲ ಅನುದಾನದಲ್ಲಿ ಮಾನ್ಯ ಸರ್ಕಾರದ ಅಧೀನ ಕಾರ್ಯದರ್ಶಿಗಳು ಬೆಂಗಳೂರ ಅವರು ಮುದ್ದೇಬಿಹಾಳ ಪುರಸಭೆಗೆ ರೂ 150.00 ಲಕ್ಷಗಳ ಅನುದಾನ ನಿಗದಿಪಡಿಸಿದ ಪ್ರಕಾರ ದಿನಾಂಕ: 27-06-2022 ರಂದು ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಚರ್ಚಿಸಿ ಕ್ರೀಯಾ ಯೋಜನೆಯನ್ನು ಸಲ್ಲಿಸಲಾಗಿತ್ತು. ಕ್ರೀಯಾಯೋಜನೆ ತಯಾರಿಸಿ ಸಲ್ಲಸಲು ತಿಳೀಸಿದ್ದರ ಬಗ್ಗೆ ಮುಖ್ಯಾಧಿಕಾರಿಗಳು ಸವಿಸ್ತಾರವಾಗಿ ಸಭೆಗೆ ವಿವರಿಸಿದರು. ಈ ಬಗ್ಗೆ ಪರಿಶೀಲಿಸಿದ ಸಭೆಯು ಈ ಕೆಳಗಿನಂತೆ ರೂಪಿಸಿದ ಕ್ರಿಯಾ ಯೋಜನೆಗೆ ಸರ್ವಾನುಮತದಿಂದ ಮಂಜೂರಿ ನೀಡಿತು. |

**ಸನ್ 2022–23 ನೇ ಸಾಲಿನ 15 ನೇ ಹಣಕಾಸು (ಜನರಲ್ ಬೇಸಿಕ) ಬಿಡುಗಡೆಯಾದ ಅನುದಾನ ರೂ: 150. ಲಕ್ಷಕ್ಕೆ ತಯಾರಿಸಿದ ಕ್ರಿಯಾಯೋಜನೆ ವಿವರ**

| ಕ್ರಮ ಸಂಖ್ಯೆ | ಕಾಮಗಾರಿ ಹೆಸರು | | | ಅಂದಾಜು ಮೊತ್ತ 150.00 (ರೂ ಲಕ್ಷಗಳಲ್ಲಿ) |
|---|---|---|---|---|
| ಅ: | ನಿರ್ಬಂಧಿತ ಅನುದಾನ ಶೇ 60% (90 ಲಕ್ಷ,ರೂ) | | | 45.00 |
| | ಕುಡಿಯುವ ನೀರು ಯೋಜನೆ | 1 | ವಾರ್ಡ ನಂ 01 ರಲ್ಲಿ ತುರಕನಗೇರಿ ಮನೆಯಿಂದ ಶಂಕರ ದೇಸಾಯಿ ಮನೆಯವರೆಗೆ ಹಾಗೂ ಮ್ಯಾಗೇರಿರವರ ಮನೆಯಿಂದ ಕುಪ್ಪೆಯವರ ಮನೆಯವರೆಗೆ ಪೈಪಲೈನ ಅಳವಡಿಸುವುದು. | 2.5 |
| | | 2 | ವಾರ್ಡ ನಂ 13 ಶಿವಪ್ಪ ಬೆನಕಟ್ಟಿ ಮನೆಯಿಂದ ಸಂಗಪ್ಪ ಮಾದರ ಮನೆಯವರೆಗೆ ಪಿವ್ಹಿಸಿ ಪೈಪಲೈನ | 3.0 |

| | | | |
|---|---|---|---|
| 3 | ವಾರ್ಡ ನಂ 11 ರಲ್ಲಿ ನೀರಿನ ಟಾಕಿ ಮತ್ತು ಪೈಪಲೈನ ನಿರ್ಮಾಣ | 1.0 | |
| 4 | ಕುಡಿಯುವ ನೀರಿನ ಘಟಕದಲ್ಲಿ 90 ಎಚ್.ಪಿ ಪಂಪ ದುರಸ್ತಿ ಮತ್ತು ವಾಲ್ವಗಳ ದುರಸ್ತಿ | 4.0 | |
| 5 | ದೇವೂರ ಜಾವಕೆಲ್ ದಲ್ಲಿ ಟಿ.ಸಿ. ದುರಸ್ತಿ | 4.50 | |
| 6 | ವಾರ್ಡ ನಂ 2 ಹಿರೇಮಠ ಮನೆಯಿಂದ ಕಲ್ಯಾಣಿಯವರ ಮನೆಯವರೆಗೆ 4" ಪೈಪಲೈನ ನಿರ್ಮಾಣ | 3.0 | |
| 7 | ಪಟ್ಟಣದ ಕುಡಿಯುವ ನೀರಿನ ಘಟಕದಲ್ಲಿ ನೀರಿನ ಪರಿಕ್ಷಾ ಸಾಮಗ್ರಿ ಖರೀದಿಸುವುದು. | 5.0 | |
| 8 | ಪಟ್ಟಣದ ಕ್ಯಾನಲ್ ಪಂಪ್ ಹೌಸದಲ್ಲಿ ಹೊಸ ಪಂಪ ಮತ್ತು ಮೋಟಾರ ಅಳವಡಿಸುವುದು. | 3.0 | |
| 9 | ವಾರ್ಡ ನಂ 5 ಪ್ಯಾಟಿಗೌಡರ ಮನೆಯಿಂದ ಬೂದಿಹಾಳ ಮನೆಯವರೆಗೆ ಜಿ.ಆಯ್ ಪೈಪಲೈನ ನಿರ್ಮಾಣ | 2.0 | |
| 10 | ವಾರ್ಡ ನಂ 15ರಲ್ಲಿ ಪೈಪಲೈನ ಮತ್ತು ವಾಲ್ವಗಳ ದುರಸ್ತಿ | 2.0 | |
| 11 | ವಾರ್ಡ ನಂ 16ರಲ್ಲಿ ಲಕ್ಷ್ಮೀಗುಡಿಯಿಂದ ಇಸ್ಮಾಯಿಲ್ ಮೋಮಿನ್ ಮನೆಯವರೆಗೆ ಪೈಪಲೈನ ನಿರ್ಮಾಣ | 2.0 | |
| 12 | ವಾರ್ಡ ನಂ 20ರಲ್ಲಿ ಇಂದಿರಾ ಸರ್ಕಲದಿಂದ ದಖನಿಯವರ ಮನೆಯವರೆಗೆ ಪೈಪಲೈನ ನಿರ್ಮಾಣ | 2.0 | |
| 13 | ವಾರ್ಡ ನಂ 19ರಲ್ಲಿ ಲಕ್ಷ್ಮೀಬಾವಿಗೆ ಮೋಟಾರ್ ಮತ್ತು ಪೈಪಲೈನ ಅಳವಡಿಸುವದು. | 2.0 | |
| 14 | ವಾರ್ಡ ನಂ 21ರಲ್ಲಿ ನಾಲತವಾಡ ಮುಖ್ಯರಸ್ತೆಯಿಂದ ನಾಯ್ಕೋಡಿ ಮನೆಯವರೆಗೆ ಪೈಪಲೈನ ಅಳವಡಿಸುವದು. | 2.0 | |
| 15 | ವಾರ್ಡ ನಂ 23ರಲ್ಲಿ ಆಶ್ರಯ ಪ್ರವೇಶ ದ್ವಾರದ ಹತ್ತಿರ ಇರುವ ಬೋರವೆಲ್ಗೆ ಮೊಟಾರ ಮತ್ತು ಸಿಸ್ಟರ್ನ, ಪೈಪಲೈನ ಅಳವಡಿಸುವದು. | 1.50 | |
| 16 | ವಾರ್ಡ ನಂ 12ರಲ್ಲಿ ಕಬಾಡೆ ಮನೆಯಿಂದ ಸಿದ್ದು ಮನೆಯವರೆಗೆ ಪೈಪಲೈನ ಅಳವಡಿಸುವದು. | 1.50 | |
| 17 | ವಾರ್ಡ ನಂ 15 ರಲ್ಲಿ ಹುಡೇದ ಹಿಂದುಗಡೆ ಪರಶುರಾಮ ಕುಂಬಾರ | 4.00 | |

| | | | | |
|---|---|---|---|---|
| | | | ಮನೆಯ ರೋಡ ಹಗೂ ಗಿರಣಿಯಿಂದ ಅಶೋಕ ನಾಡಗೌಡ್ರ ಮನೆಯಹಿಂದೆ ಅಗಸರ ಚಾಳವರಗೆ ಜಿ ಐ ಪೈಪ ಅಳವಡಿಸುವುದು. | |
| | | | | **45.00** |
| 2 | ಘನತ್ಯಾಜ್ಯ ನಿರ್ವಹಣೆ ಶೇ 30 ( 45 ಲಕ್ಷ,ರೂ) | 1 | ಘನತಾಜ್ಯ ನಿರ್ವಹಣಾ ಘಟಕಕ್ಕೆ ಜೆ.ಸಿ.ಬಿ. ಖರೀದಿಸುವುದು. | 38.00 |
| | | 2 | ಘನತಾಜ್ಯ ನಿರ್ವಹಣಾ ಘಟಕದಲ್ಲಿ ಇರುವ ಹಳೆಯ ವಾಹನಗಳ ವಾರ್ಷಿಕ ದುರಸ್ತಿಗಾಗಿ ಕಾಯ್ದಿರಿಸಿದ ಮೊತ್ತ | 7.50 |
| | | | ಒಟ್ಟು | 45.00 |
| **ಆ** | **ಮುಕ್ತ ಅನುದಾನ (ಮೂಲ ಅನುದಾನ) ಶೇ 40% (60.00 ಲಕ್ಷ,ರೂ)** | | | |
| 1 | ಕುಡಿಯುವ ನೀರು ಸರಬರಾಜು | 1 | | |
| 2 | ಘನ ತ್ಯಾಜ್ಯ ನಿರ್ವಹಣೆ | 1 | | |
| 3 | ನೈರ್ಮಲ್ಯ ಮತ್ತು ಸೆಪ್ಟೇಜಗಳ ನಿರ್ವಹಣೆ | 1 | | |
| 4 | ಒಳ ಚರಂಡಿ ವ್ಯವಸ್ಥೆ ಕಾಮಗಾರಿಗಳು | 1 | | |
| 5 | ರಸ್ತೆ ಮತ್ತು ಪಾದಚಾರಿ ಮಾರ್ಗಗಳು | 1 | ವಾರ್ಡ ನಂ 19 ತುರಕನಗೇರಿ ಮನೆಯಿಂದ ಏಕಿನ ಮನೆಯವರೆಗೆ ಫೇವರ ಬ್ಲಾಕ ರೋಡ ನಿರ್ಮಾಣ. | 3.0 |
| | | 2 | ವಾರ್ಡ ನಂ 21 ಹಕೀಮರವರ ಮನೆಯಿಂದ ಕಣಕಾಲ ರವರ ಮನೆಯವರೆಗೆ ರಸ್ತೆ ನೀರ್ಮಾಣ | 3.0 |

| | | | | | |
|---|---|---|---|---|---|
| | | 3 | ವಾರ್ಡ ನಂ 05 ಮಠಾಂದರ ಮನೆಯಿಂದ ಮೇಟಿ ಮನೆಯವರೆಗೆ ,ಬಿರಾದಾರ ಮನೆಯಿಂದ ಮೈಬೂಬ ಕುಂಟೋಜಿ, ಗಿಂಡಿಯವರ ಮನೆಯಿಂದ ಹಿರೇಮಠ ಸರ್ ಮನೆಯವರೆಗೆ ಫೇವರ ಬ್ಲಾಕ ರೋಡ ನಿರ್ಮಾಣ. | 3.0 | |
| | | 4 | ವಾರ್ಡ ನಂ 04 ಬಸವರಾಜ ಹೂಗಾರರವರ ಮನೆಯಿಂದ ರವಿ ದಂಡಾವತಿ ಮನೆಯವರೆಗೆ ಫೇವರ ಬ್ಲಾಕ ರಸ್ತೆ ನಿರ್ಮಾಣ. | 2.5 | |
| | | 5 | ವಾರ್ಡ ನಂ 08 ಗೊಳಸಂಗಿ ಮನೆಯಿಂದ ಪತ್ರಿಯವರ ಮನೆಯವರೆಗೆ ಫೇವರ ರೋಡ ನಿರ್ಮಾಣ. | 2.5 | |
| | | 6 | ವಾರ್ಡ ನಂ 17 ರಲ್ಲಿ ಮಾಂತೇಶ ನಾವದಗಿ ಮನೆಯಿಂದ ನಾಗಠಾಣಬಾವಿ ಮತ್ತು ನಾಗಠಾಣ ಬಾವಿಯಿಂದ ನಾಸಿಯವರ ಮನೆಯವರೆಗೆ ಫೇವರ ರೋಡ ನಿರ್ಮಾಣ. | 2.5 | |
| | | 7 | ವಾರ್ಡ ನಂ 12 ರಲ್ಲಿ ಹಾಜಿ ಹಡಗಲಿ ಮನೆಯಿಂದ ಕೃಷ್ಣ ಮೂರ್ತಿ ಮನೆಯವರೆಗೆ ಮತ್ತು ಬಾಷಾಸಾಬ ದಮನಿ ಮನೆಯಿಂದ ಹೂಗಾರರವರವ ಮನೆಯವರೆಗೆ ರಸ್ತೆ ನಿರ್ಮಾಣ. | 2.0 | |
| | | 8 | ವಾರ್ಡ ನಂ 10ರಲ್ಲಿ ರಫೀಕ ವತನದಾರರವರ ಮನೆಯ ಹಿಂದಿನ ರಸ್ತೆ ಮತ್ತು ಸಾಯಿ ಲಮಾಣಿಯವರ ಮನೆಯಿಂದ ಜಾವಡಗಿಯವರ ಮನೆಯವರೆಗೆ ಫೇವರ ರೋಡ ನಿರ್ಮಾಣ. | 4.00 | |
| | | 9 | ವಾರ್ಡ ನಂ 09 ರಲ್ಲಿ ಹೂಗಾರ ಮನೆಯಿಂದ ಕಂಬಳಿಯವರ ಮನೆಯವರೆಗೆ ರಸ್ತೆ ಮತ್ತು ಚರಂಡಿ ಮೇಲೆ ಸ್ಲ್ಯಾಬ ನಿರ್ಮಾಣ | 5.00 | |
| | | 10 | ವಾರ್ಡ ನಂ 20ರಲ್ಲಿ ಕಾಸೀಮಸಾಬ ಮುಳಬಾವಿ ಮನೆಯಿಂದ ಟಿಪ್ಪುಸುಲ್ತಾನ ವೃತ್ತದವರೆಗೆ ಫೇವರ ರಸ್ತೆ ನಿರ್ಮಾಣ. | 3.0 | |
| | | 11 | ವಾರ್ಡ ನಂ 11 ಬಿಳಿಬಾವಿ ಮನೆಯಿಂದ ಮುಲ್ಲಾ ಮನೆಯವರೆಗೆ ರಲ್ಲಿ ರಸ್ತೆ ನಿರ್ಮಾಣ. | 3.0 | |
| 6 | ಮಳೆ ನೀರುಚರಂಡಿ | 1 | ವಾರ್ಡ ನಂ 22 ರಲ್ಲಿ ಚರಂಡಿ ದುರಸ್ತಿ ಮಾಡುವುದು. | 2.50 | |

| | | | | | |
|---|---|---|---|---|---|
| 7 | ಬೀದಿ ದೀಪ/ವಿದ್ಯುತ್ ಉಳಿತಾಯ ಕ್ರಮಗಳ | 1 | ವಾರ್ಡ ನಂ 14 ಅಂಬೇಡ್ಕರ ಕಾಲೋನಿ, ಮಾಲಗತ್ತಿಯವರ ಮನೆ ಹತ್ತಿರ, ಹರಿಜನ ಕೇರಿಯಲ್ಲಿ ಹೈ ಮಾಸ್ಕ ಅಳವಡಿಸುವದು. | 5.0 | |
| | | 2 | ವಾರ್ಡ ನಂ 13 ಇಂದಿರಾ ನಗರ ಸ್ಕೂಲ ಹತ್ತಿರ ಮಿನಿ ಹೈ ಮಾಸ್ಕ ಅಳವಡಿಸುವದು. | 2.0 | |
| | | 3 | ವಾರ್ಡ ನಂ 03 ರಲ್ಲಿ ಎಲ್. ಇ.ಡಿ ಬಲ್ಪ ಖರಿದಿಸುವುದು. | 2.5 | |
| | | 4 | ವಾರ್ಡ ನಂ 07 ಹುಡ್ಕೋ ಉದ್ಯಾನವನದಲ್ಲಿ ಹೈಮಾಸ್ಟ ಅಳವಡಿಸುವುದು. | 2.5 | |
| | | 5 | ವಾರ್ಡ ನಂ 12 ರಲ್ಲಿ ಉಪನಾಳ ರವರ ಮನೆಯ ಮಿನಿ ಹೈಮಾಸ್ಟ ಅಳವಡಿಸುವುದು. | 1.5 | |
| | | 6 | ವಾರ್ಡ ನಂ 10 ರಲ್ಲಿ ಎಲ್. ಇ.ಡಿ ಬಲ್ಪ ಖರಿದಿಸುವುದು. | 1.00 | |
| 8 | ಉದ್ಯಾನವನ ಮತ್ತು ಹಸಿರು ಜಾಗಅಭಿವೃದ್ದಿ | | | | |
| 9 | ಸ್ಮಶಾಣ /ಚಿತಾಗಾರ | 1 | ಪಟ್ಟಣದ ಈದ್ಗಾ ಸ್ಮಶಾನದಲ್ಲಿ ಮೊಟಾರ ಮತ್ತು ಪೈಪಲೈನ ಅಳವಡಿಸುವುದು. | 1.5 | |
| 10 | ಸಾರ್ವಜನಿಕ ಸೌಲಭ್ಯ ಬಸ್ ನಿಲ್ದಾಣ ವಾಹನ ನಿಲ್ಲುಗಡೆ ಸ್ಥಳ ಮತ್ತು ಶೌಚಾಲಯ | 1 | ವಾರ್ಡ ನಂ 06 ರಾಘವೇಂದ್ರ ಗುಡಿ ಹಿಂದುಗಡೆ ಶೌಚಾಲಯ ನಿರ್ಮಾಣ. | 5.0 | |
| | | 2 | ವಾರ್ಡ ನಂ 16 ರಲ್ಲಿ ಎಂಟಗಡಗಡಗಿ ಬಾವಿ ಹತ್ತಿರ ಶೌಚಾಲಯ ನಿರ್ಮಾಣ | 3.0 | |
| 11 | ನಗರಅರಣ್ಯ ಪರಿಸರರಕ್ಷಣೆ ಮತ್ತು ಪರಿಸರ ಅಂಶಗಳ ಪ್ರಚಾರಅಭಿಯಾನ | | | | |
| 12 | ಕೊಳಗೇರಿ ಸುಧಾರಣೆ ಮತ್ತು ನವೀಕರಣ | | | | |

| | | | | | |
|---|---|---|---|---|---|
| 13 | ಅಂಗನವಾಡಿ ಕೇಂದ್ರ ಕಟ್ಟಡ ನಿರ್ಮಾಣ ಮತ್ತು( ನೀರು ಸರಬರಾಜು ಸಂಪರ್ಕ ಮತ್ತು ಶೌಚಾಲಯಗಳೊಂದಿಗೆ) | | | | |
| | | | | ಒಟ್ಟು | 150.00 |

ಈ ಮೇಲ್ಕಂಡಂತೆ ತಯಾರಿಸಿದ ಕ್ರಿಯಾಯೋಜನೆಗೆ ಮಾನ್ಯ ಜಿಲ್ಲಾಧಿಕಾರಿಗಳು ವಿಜಯಪೂರ ಇವರಿಂದ ಅನುಮೋದನೆ ಪಡೆಯಲು ಮತ್ತು ನಿಯಮಾನುಸಾರ ಮುಂದಿನ ಸೂಕ್ತ ಕ್ರಮ ಜರುಗಿಸಲು ಮುಖ್ಯಾಧಿಕಾರಿಗಳಿಗೆ ಸೂಚಿಸಿ ಸರ್ವಾನುಮತದಿಂದ ಠರಾವು ಪಾಸು ಮಾಡಲಾಯಿತು.

ಸೂಚಕರು:-ಮಹಿಬೂಬ ಗೋಳಸಂಗಿ

ಅನುಮೋದಕರು :- ವೀರೇಶ. ಹಡಲಗೇರಿ

ಅಧ್ಯಕ್ಷರು
ಪುರಸಭೆ ಮುದ್ದೇಬಿಹಾಳ

"ಅಸಲಿನಂತೆ ನಕಲು"
ಮುಖ್ಯಾಧಿಕಾರಿ
ಪುರಸಭೆ ಮುದ್ದೇಬಿಹಾಳ